**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಪಿ.ಹೆಚ್.ಪೂಜಾರ ಹಾಗೂ ಶ್ರೀ ಶಶೀಲ್ ಜಿ.ನಮೋಶಿ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ**

ದಿನಾಂಕ: 10-08-2025, ಭಾನುವಾರದಂದು ಕನ್ನಡ ದಿನ ಪತ್ರಿಕೆಯಲ್ಲಿ ರಾಜ್ಯದ 7 ಜಿಲ್ಲೆಗಳಲ್ಲಿ 2,719 ಮಹಿಳೆಯರು ನಾಪತ್ತೆ, ಕಲ್ಯಾಣ ಕರ್ನಾಟಕ ಭಾಗದಲ್ಲೇ ಹೆಚ್ಚು ಪ್ರಕರಣಗಳು ದಾಖಲು ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೊಂಡಿರುವ ವಿಷಯವನ್ನು ಶೂನ್ಯ ವೇಳೇಯಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ.

ರಾಜ್ಯದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ನಾಪತ್ತೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ವಿಷಯ ಅತ್ಯಂತ ನೋವಿನ ಸಂಗತಿ. ಇಂತಹ ಪ್ರಕರಣಗಳು ರಾಜ್ಯಾದ್ಯಂತ ತೀವ್ರ ಕಳವಳಕ್ಕೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು, ಮಹಿಳೆಯರ ನಾಪತ್ತೆಯನ್ನು ತಡೆಗಟ್ಟಲು ಮತ್ತು ನಾಪತ್ತೆಯಾದವರನ್ನು ಶೀಘ್ರವಾಗಿ ಪತ್ತೆ ಹಚ್ಚಲು ಸರ್ಕಾರ ಮುಂದಾಗಬೇಕಾಗಿದ್ದು, ಈ ನಾಡಿನಲ್ಲಿ ಸಮಾಜ ಮತ್ತು ಕುಟುಂಬಗಳು ಒಟ್ಟಾಗಿ ಕೆಲಸ ಮಾಡಬೇಕಿದೆ. ಮಹಿಳೆಯರಿಗೆ ಸುರಕ್ಷಿತ ವಾತಾವರಣವನ್ನು ಸೃಷ್ಟಿಸುವುದು, ಕುಟುಂಬಗಳಲ್ಲಿ ಸಂವಹನವನ್ನು ಸುಧಾರಿಸುವುದು ಮತ್ತು ಮಾನವ ಕಳ್ಳಸಾಗಣೆ ಜಾಲಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಲು ಸರ್ಕಾರ ಎಚ್ಚರ ವಹಿಸಬೇಕಾಗಿದೆ.

ಕಳೆದ 3 ವರ್ಷಗಳಲ್ಲಿ ರಾಜ್ಯದ 7 ಜಿಲ್ಲೆಗಳಿಂದ 2,719 ಮಹಿಳೆಯರು ಮತ್ತು ಹೆಣ್ಣು ಮಕ್ಕಳು ನಾಪತ್ತೆ ಪ್ರಕರಣಗಳು ದಾಖಲಾಗಿರುವ ವಿಷಯ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿದೆ. 2023ರ ಸಾಲಿನಲ್ಲಿ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಾದ ರಾಯಚೂರು (228), ಬೀದರ್ (182), ವಿಜಯನಗರ (165) ಮತ್ತು ಕೊಪ್ಪಳ (176) ಜಿಲ್ಲೆಗಳಲ್ಲಿ ನಾಪತ್ತೆ ಪ್ರಕರಣಗಳು ಹೆಚ್ಚಿದ್ದವು. 2024 ರಲ್ಲಿ ಬೀದರ್ (247), ರಾಯಚೂರು (225), ಕೊಪ್ಪಳ (213) ಮತ್ತು ವಿಜಯನಗರ (215) ಜಿಲ್ಲೆಗಳಲ್ಲಿ ಅತಿ ಹೆಚ್ಚು ಪ್ರಕರಣಗಳನ್ನು ದಾಖಲಿಸಿವೆ ಎಂದು ಗೃಹ ಇಲಾಖೆಯೇ ತಿಳಿಸಿರುವುದು ವರದಿಯಾಗಿದೆ.

ಇದರಿಂದಾಗಿ ರಾಜ್ಯದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲವೇ ಎಂಬ ಸಂಶಯ ಹೆಚ್ಚುತ್ತಿದೆ. ಈ ಅಂಕಿ-ಅಂಶಗಳ ಪ್ರಕಾರ, ಕಳೆದ ಮೂರು ವರ್ಷಗಳಲ್ಲಿ 2,425 ಮಹಿಳೆಯರು ಪತ್ತೆಯಾಗಿದ್ದರೆ, ಇನ್ನುಳಿದ 294 ಮಹಿಳೆಯರ ಬಗ್ಗೆ ಯಾವುದೇ ಸುಳಿವು ಇಲ್ಲ. ಇವರು ಎಲ್ಲಿದ್ದಾರೆ, ಅವರ ಸ್ಥಿತಿಯೇನು ಎಂಬ ಪ್ರಶ್ನೆಗಳು ಕುಟುಂಬಸ್ಥರನ್ನು ಮತ್ತು ಸಾರ್ವಜನಿಕರನ್ನು ಇಂದಿಗೂ ಕಾಡುತ್ತಿವೆ. ನಾಪತ್ತೆಗೊಂಡ ಮಹಿಳೆಯರ ಕುಟುಂಬದಲ್ಲಿ ಆರ್ಥಿಕ ಕೌಟುಂಬಿಕ ಕಲಹಗಳು, ಸಮಸ್ಯೆಗಳು, ಪ್ರೇಮ ವಿವಾಹದ ಕಾರಣದಿಂದ ಮನೆ ತೊರೆಯುವುದು, ಮಾನವ ಕಳ್ಳಸಾಗಣೆ ಜಾಲಕ್ಕೆ ಸಿಲುಕುವುದು ಮತ್ತು ಕೆಲವೊಮ್ಮೆ ಅಪಹರಣಗಳ ಬಲೆಗೆ ಸಿಕ್ಕಿರಬಹುದು. ಆದರೆ, ಪತ್ತೆಯಾಗದೆ ಉಳಿದಿರುವ ಮಹಿಳೆಯರ ಪ್ರಕರಣಗಳು ಹೆಚ್ಚು ಆತಂಕಕಾರಿ, ಮಹಿಳೆಯರ ನಾಪತ್ತೆಗಳ ಹಿಂದೆ ಗಂಭೀರವಾದ ಷಡ್ಯಂತ್ರ ಹಾಗೂ ಸಂಚು ಇರಬಹುದು ಎಂಬ ಕಾರಣಗಳು ಜನರಲ್ಲಿ ಶಂಕೆಗೆ ವ್ಯಕ್ತವಾಗಿದೆ.

ನಾಪತ್ತೆಯಾದವರ ಪ್ರಕರಣಗಳನ್ನು ನಿಭಾಯಿಸಲು ಸರ್ಕಾರ ಮತ್ತು ಪೊಲೀಸ್ ಇಲಾಖೆಗಳು ಹಲವಾರು ಪ್ರಮುಖ ಕ್ರಮಗಳನ್ನು ಕೈಗೊಂಡಿದ್ದರೂ, ಈ ಎಲ್ಲಾ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹಲವು ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗದೇ ಇರುತ್ತಿರುವುದು ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುತ್ತದೆ.

ರಾಜ್ಯದಲ್ಲಿ ನಾಪತ್ತೆಗೊಂಡ ಮಹಿಳೆಯರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ತ್ವರಿತಗತಿಯಲ್ಲಿ ತನಿಖೆಗೆ ಒಳಪಡಿಸಿ ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಶೇಷ ತಂಡಗಳನ್ನು ರಚಿಸಬೇಕೆಂದು ಮನವಿ ಮಾಡುತ್ತಾ, ಇಂತಹ ಪ್ರಕರಣಗಳಲ್ಲಿ ಭಾಗಿಯಾದವರ ವಿರುದ್ಧ ಕಾನೂನಿನ ರೀತಿಯಲ್ಲಿ ಕಠಿಣ ಕ್ರಮ ಜರುಗಿಸಿ, ಶಿಕ್ಷೆಗೆ ಒಳಪಡಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಈ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ**

ರಾಜ್ಯದಲ್ಲಿ ಮಹಿಳೆಯ ಮತ್ತು ಮಕ್ಕಳ ಕಾಣೆ ಪ್ರಕರಣಗಳು ವರದಿಯಾಗಿರುವುದು ಗಮನಕ್ಕೆ ಬಂದಿರುತ್ತದೆ. ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ಕಾಣೆಯಾದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು, ಪತ್ತೆಯಾದ ಮತ್ತು ಪತ್ತೆ ಹಚ್ಚಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.

| ಕ್ರ. ಸಂ. | ಕರ್ನಾಟಕ ರಾಜ್ಯ | 2023 | | | 2024 | | | 2025 | | |
|---|---|---|---|---|---|---|---|---|---|---|
| | | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ |
| 1 | ಮಹಿಳೆಯರು | 13392 | 13076 | 316 | 14272 | 13826 | 446 | 8957 | 7600 | 1357 |
| 2 | ಹೆಣ್ಣು ಮಕ್ಕಳು | 2131 | 2083 | 48 | 2446 | 2293 | 153 | 1619 | 933 | 686 |

ಜಿಲ್ಲಾವಾರು ಮಾಹಿತಿಯನ್ನು **ಅನುಬಂಧಲ್ಲಿ** ಒದಗಿಸಲಾಗಿದೆ.

ರಾಜ್ಯದ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ದಾಖಲಾದ ಹಾಗೂ ನಾಪತ್ತೆ/ಕಾಣೆಯಾದ ಮಹಿಳೆಯರ ( **18 ವರ್ಷ ಮೇಲ್ಪಟ್ಟವರು**) ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ

| ಕ್ರ. ಸಂ. | ಜಿಲ್ಲೆಯ ಹೆಸರು | 2023 | | | 2024 | | | 2025 | | |
|---|---|---|---|---|---|---|---|---|---|---|
| | | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ |
| 1 | ಬೀದರ್ | 164 | 154 | 10 | 210 | 203 | 7 | 186 | 162 | 24 |
| 2 | ರಾಯಚೂರು | 209 | 200 | 9 | 193 | 186 | 7 | 186 | 158 | 28 |
| 3 | ಬಳ್ಳಾರಿ | 95 | 87 | 8 | 136 | 130 | 6 | 80 | 54 | 26 |
| 4 | ವಿಜಯನಗರ | 160 | 153 | 7 | 183 | 177 | 6 | 137 | 107 | 30 |
| 5 | ಕೊಪ್ಪಳ | 158 | 153 | 5 | 185 | 181 | 4 | 148 | 108 | 40 |
| 6 | ಯಾದಗಿರಿ | 70 | 70 | 0 | 100 | 97 | 3 | 61 | 47 | 14 |
| 7 | ಕಲಬುರಗಿ ಜಿಲ್ಲೆ | 117 | 115 | 2 | 144 | 134 | 10 | 148 | 85 | 63 |
| | ಕಲಬುರಗಿ ನಗರ | 121 | 117 | 4 | 149 | 143 | 6 | 116 | 84 | 32 |
| | ಒಟ್ಟು | **1094** | **1049** | **45** | **1300** | **1251** | **49** | **1062** | **805** | **257** |

ರಾಜ್ಯದ ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ಅಪಹರಣ/ಕಾಣೆಯಾದ ಹೆಣ್ಣು ಮಕ್ಕಳ(18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು) ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಜಿಲ್ಲೆಯ ಹೆಸರು | 2023 | | | 2024 | | | 2025 | | |
|---|---|---|---|---|---|---|---|---|---|---|
| | | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ | ವರದಿ | ಪತ್ತೆ | ಬಾಕಿ |
| 1 | ಬೀದರ್ | 18 | 16 | 2 | 37 | 35 | 2 | 37 | 20 | 17 |
| 2 | ರಾಯಚೂರು | 19 | 18 | 1 | 31 | 30 | 1 | 22 | 12 | 10 |
| 3 | ಬಳ್ಳಾರಿ | 29 | 29 | 0 | 27 | 26 | 1 | 24 | 14 | 10 |
| 4 | ವಿಜಯನಗರ | 25 | 25 | 0 | 32 | 31 | 1 | 22 | 16 | 6 |
| 5 | ಕೊಪ್ಪಳ | 18 | 18 | 0 | 26 | 22 | 4 | 14 | 12 | 2 |
| 6 | ಯಾದಗಿರಿ | 8 | 8 | 0 | 18 | 18 | 0 | 5 | 3 | 2 |
| 7 | ಕಲಬುರಗಿ ಜಿಲ್ಲೆ | 35 | 32 | 3 | 50 | 46 | 4 | 31 | 8 | 23 |
| | ಕಲಬುರಗಿ ನಗರ | 19 | 19 | 0 | 35 | 31 | 4 | 23 | 18 | 5 |
| | ಒಟ್ಟು | 171 | 165 | 6 | 256 | 239 | 17 | 178 | 103 | 75 |

**ಮಹಿಳೆಯ ಮತ್ತು ಮಕ್ಕಳ ಅಪಹರಣ/ಕಾಣೆ / ಕಳ್ಳಸಾಗಣಿಕೆಯನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ವಿವರಗಳು.**

- ಮಹಿಳೆ ನಾಪತ್ತೆ ಪ್ರಕರಣಗಳಲ್ಲಿ ಕಾಣೆ ಪ್ರಕರಣಗಳನ್ನು ಹಾಗೂ ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಅಪಹರಣದಡಿ ಕೂಡಲೇ ವಿಳಂಬ ಮಾಡದೆ ಎಫ್.ಐ.ಆರ್. ಅನ್ನು ದಾಖಲಿಸಲಾಗುವುದು.
- ಮಹಿಳೆ ಮತ್ತು ಮಕ್ಕಳ ಸುರಕ್ಷತಾ ದೃಷ್ಟಿಯಿಂದ ರಾಜ್ಯದ 1050 ಪೊಲೀಸ್ ಠಾಣೆಗಳಲ್ಲಿ Women Help Desk ಗಳನ್ನು ಸ್ಥಾಪಿಸಲಾಗಿದೆ. ಈ Help Deskಗಳು 24/7 ಕಾರ್ಯ ನಿರ್ವಹಿಸುತ್ತಿವೆ.
- ರಾಜ್ಯದಲ್ಲಿ 42 ಮಹಿಳಾ ಠಾಣೆಗಳು ಕಾರ್ಯ ನಿರ್ವಹಿಸುತ್ತಿರುತ್ತವೆ.
- ಪ್ರತಿ ಪೊಲೀಸ್ ಉಪ ಉಪ ವಿಭಾಗದಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳು (SJPU) ಕಾರ್ಯನಿರ್ವಹಿಸುತ್ತಿರುತ್ತದೆ.
- ಮಹಿಳೆ ಮತ್ತು ಮಕ್ಕಳ ಮೇಲಿನ ಅಪರಾಧಗಳ ಶೀಘ್ರ ಸ್ಪಂದನೆಗಾಗಿ, ಪ್ರತಿ ಮಾನವ ಕಳ್ಳಸಾಗಾಣಿಕೆ ಘಟಕಗಳಿಗೆ ಹಿರಿಯ ಮತ್ತು ಕಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನಿಯೋಜಿಸಿ, ಅವರುಗಳಿಗೆ ಮಕ್ಕಳ ಪ್ರಕರಣಗಳನ್ನು ನಿರ್ವಹಿಸುವ ಕುರಿತು ತರಬೇತಿ ನೀಡಲಾಗಿರುತ್ತದೆ.
- ಕಾಣೆಯಾದ ಮಕ್ಕಳ ಪತ್ತೆಗಾಗಿ ಚೈಲ್ಡ್ ಟ್ರಾಕ್ /ವಾತ್ಸಲ್ಯ ಪೋರ್ಟಲ್ ಅನ್ನು ಸ್ಥಾಪಿಸಿದ್ದು, ರಾಷ್ಟ್ರವ್ಯಾಪ್ತಿ ಮಕ್ಕಳ ಕಾಣೆ ಪ್ರಕರಣಗಳ ಮಾಹಿತಿಯನ್ನು ಮತ್ತು ಪತ್ತೆಯಾದ ಮಕ್ಕಳ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ಇದರಿಂದ ಕಾಣೆ ಪ್ರಕರಣಗಳ ಮಾಹಿತಿ ವಿನಿಮಯ/ಹಂಚಿಕೆ ಮಾಡಿಕೊಳ್ಳಲು ಅನುಕೂಲವಾಗಿರುತ್ತದೆ.
- ಮಿಸ್ಸಿಂಗ್ ಪರ್ಸನ್ ಟ್ರ್ಯಾಕಿಂಗ್ ಸಿಸ್ಟಂ (MP): ನಾಪತ್ತೆಯಾದವರ ಮಾಹಿತಿ ರಾಷ್ಟ್ರಮಟ್ಟದಲ್ಲಿ ವಿವಿಧ ಆನ್‌ಲೈನ್ ಪ್ಲ್ಯಾಟ್ ಫಾರ್ಮ್ ಗಳಲ್ಲಿ ಮಾಹಿತಿ ಸಲ್ಲಿಸಿಕೊಂಡು ಪತ್ತೆ ಮಾಡಲು ಕ್ರಮವಹಿಸಲಾಗುತ್ತಿದೆ.

- ಮಹಿಳೆಯರ ಮತ್ತು ಮಕ್ಕಳ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಇತರೆ ಸರ್ಕಾರಿ ಇಲಾಖೆ ಹಾಗೂ ಸಂಘ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿ ಮಾಹಿತಿ ವಿನಿಮಯ ಮಾಡಿಕೊಂಡು, ಪರಸ್ಪರ ಸಹಕಾರ ಮತ್ತು ಸಮನ್ವಯದೊಂದಿಗೆ ಕಾರ್ಯಹಿಸಲಾಗುತ್ತಿದೆ.
- ಕಾಣೆ ಪ್ರಕರಣಗಳು ವರದಿಯಾದ ಕೂಡಲೇ ರಾಜ್ಯದ ಎಲ್ಲಾ ಠಾಣೆಗಳಿಗೆ ಪ್ರಕರಣದ ಆರೋಪಿ ಮತ್ತು ನಾಪತ್ತೆಯಾಗಿರುವ ಮಹಿಳೆ ಅಥವಾ ಅಪಹರಿಸಿರುವ ಮಕ್ಕಳ ಬಗ್ಗೆ, ಯಾವುದೇ ಸುಳಿವು ದೊರೆತರೆ ಮಾಹಿತಿ ಪಡೆದುಕೊಳ್ಳಲು ಪೋಷಕರ ಒಪ್ಪಿಗೆ ಮೇರೆಗೆ ಪತ್ರಿಕಾ ಪ್ರಕಟಣೆ, ದೂರದರ್ಶನ, ಆಕಾಶವಾಣಿ ಇತ್ಯಾದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ರಾಜ್ಯದ ಗಡಿ ಪ್ರದೇಶಗಳಲ್ಲಿ ಮತ್ತು ಬಸ್ ನಿಲ್ದಾಣ/ರೈಲ್ವೆ ನಿಲ್ದಾಣಗಳಲ್ಲಿ ಭಿತ್ತಿ ಪತ್ರಗಳನ್ನು/ಫೋಟೋಗಳನ್ನು ಅಂಟಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
- ರಿಜಿನಲ್ ಪಾಸ್‌ಪೋರ್ಟ್ ಆಫೀಸ್ ರವರಿಗೆ ಯಾರಾದರೂ ನವಜಾತ ಮಕ್ಕಳಿಗೆ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿರುವರೇ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.
- ಲುಕ್-ಔಟ್ ನೋಟೀಸ್ ನೀಡುವುದು, ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಹುಡುಕಾಟ ನಡೆಸುವುದು.
- ಅಧಿಕಾರಿಗಳ ತಂಡವನ್ನು ನಿರ್ಮಿಸಿ ಎಲ್ಲಾ ಕಡೆ ಹುಡುಕಾಟ ನಡೆಸುವುದು, ಅಕ್ಕ-ಪಕ್ಕದ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸುವುದು, ಜಿಲ್ಲಾ ಅಪರಾಧ ದಾಖಲಾತಿ ವಿಭಾಗಗಳಲ್ಲಿನ ವರದಿಗಳನ್ನು ಪರಿಶೀಲಿಸುವುದು, ದಿನ ಪತ್ರಿಕೆ ಮತ್ತು ದೂರದರ್ಶನದಲ್ಲಿ ಕಾಣೆಯಾದ ಮಕ್ಕಳ ಭಾವಚಿತ್ರವನ್ನು ಪ್ರಸಾರ ಮಾಡುವುದು.
- ಮಾನವ ಸಾಗಣಿಕೆ ಮಾಡುವವರ ವಿರುದ್ಧ ಬಾತ್ಮಿ ಸಂಗ್ರಹಿಸಿ ತಪ್ಪಿತಸ್ಥರ ವಿರುದ್ಧ ಕಲಂ 370, 370(A) ಐಪಿಸಿ /143, 144 BNS ಮತ್ತು ಇಮ್‌ಮೋರಲ್ ಟ್ರಾಫಿಕ್ ಪ್ರಿವೆನ್‌ಷನ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆಗಳ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
- ಮಾನವ ಕಳ್ಳಸಾಗಾಣಿಕೆ/ಕಾಣೆ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿರ್ದಿಷ್ಟ ಕಾರ್ಯವಿಧಾನವನ್ನು ಸಿದ್ಧಪಡಿಸಿ, ಸ್ಥಾಯಿ ಆದೇಶದ ಮೂಲಕ ರಾಜ್ಯ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.
- ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ಹಾಗೂ ಗ್ರಾಮಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.
- ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಭಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ.
- ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಿದ್ದು, ಸದರಿ ಪಡೆಯು ನಗರದ ಮತ್ತು ಜಿಲ್ಲಾ ವ್ಯಾಪ್ತಿಯ ಶಾಲಾ- ಕಾಲೇಜು, ಪಾರ್ಕ್‌ಗಳು, ಹಾಸ್ಟೆಲ್, ಪಿಜಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಇತರೆ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಓಡಾಡುವ ಸ್ಥಳಗಳ ಪ್ರತಿದಿನ ಗಸ್ತು ಕರ್ತವ್ಯ ನಿರ್ವಹಿಸುತ್ತಾರೆ.
- ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನ ನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿ.ಸಿ.ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ.
- ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಸುತ್ತಾಮುತ್ತ ಲಭ್ಯವಿದ್ದ ಸಿ.ಸಿ.ಟಿ.ವಿ ಕ್ಯಾಮರದ ಫುಟೇಜ್‌ಗಳನ್ನು ಪರಿಶೀಲನೆ ಮಾಡಲಾಗುತ್ತದೆ.
- ಲಭ್ಯವಿರುವ ಮಾಹಿತಿಯೊಂದಿಗೆ (ಚಹರೆ) ಟ್ರಾಕ್ ಚೈಲ್ಡ್ ತಂತ್ರಾಂಶದಲ್ಲಿ ಮಗುವಿನ ದೈಹಿಕ ಚಹರೆಯನ್ನು ಮಿಸ್ಸಿಂಗ್ ಪರ್ಸನ್ ಬ್ಯೂರೋಗೆ ಕಳುಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

- ಮಾನವ ಕಳ್ಳಸಾಗಾಣಿಕೆ ಪ್ರಕರಣಗಳನ್ನು ತಡೆಗಟ್ಟಲು ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕ ಹಾಗೂ ಸಂಬಂಧಪಟ್ಟ ಎಸ್‌ಸಿಆರ್‌ಬಿ (ರಾಜ್ಯ ಅಪರಾಧ ದಾಖಲಾತಿ ಘಟಕ) ಮತ್ತು ಎನ್‌ಸಿಆರ್‌ಬಿ (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾನವ ಕಳ್ಳಸಾಗಾಣಿಕೆ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.
- ಅಪಹರಣಕ್ಕೊಳಗಾದ ಮಗುವಿನ ಭಾವಚಿತ್ರಗಳ ನೋಟಿಸ್‌ಗಳನ್ನು ಸುತ್ತಮುತ್ತಲ್ಲಿನ ಪ್ರದೇಶಗಳಲ್ಲಿ ಅಂಟಿಸುವ ಮೂಲಕ, ಸಾಮಾಜಿಕ ಜಾಲತಾಣಗಳಲ್ಲಿ, ಎಲ್ಲಾ ವರ್ಗದ ಜನತೆಯನ್ನೂ ತಲುಪುವಂತೆ ವ್ಯಾಪಕ ಪ್ರಚಾರ ನೀಡಿ ಸಾರ್ವಜನಿಕರ ಸಹಕಾರದಿಂದ ಈ ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುತ್ತದೆ.
- ಶಾಪಿಂಗ್ ಮಾಲುಗಳು, ಉದ್ಯಾನವನಗಳು, ಮನರಂಜನಾ ಸ್ಥಳಗಳು, ಕ್ರೀಡಾ ಸ್ಥಳಗಳು, ಮತ್ತು ಅಪಹರಣಕ್ಕೊಳಗಾದ ಮಕ್ಕಳು ಸಾಮಾನ್ಯವಾಗಿ ಇರಬಹುದಾದ ಸ್ಥಳಗಳಲ್ಲಿ ಶೋಧನೆ ಮಾಡಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.
- ಎನ್.ಜಿ.ಓ.ಗಳ ಸಹಕಾರದೊಂದಿಗೆ ಕಾಣೆಯಾದ ಮಕ್ಕಳ ಪತ್ತೆಗಾಗಿ ಶ್ರಮಿಸಲಾಗುತ್ತಿದೆ.
- ನಿರ್ಮಾಣದ ಹಂತದಲ್ಲಿರುವಂತಹ ಕಟ್ಟಡಗಳು, ಬಳಕೆಯಾಗದಂತಹ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಔಷಧಾಲಯಗಳು, ರೈಲ್ವೆ ಪೊಲೀಸರು ಮತ್ತಿತರ ಸ್ಥಳಗಳಲ್ಲಿ ವಿಚಾರಣೆ ನಡೆಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.
- ಪತ್ತೆಯಾಗದ ಕಾಣೆಯ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ ಎಹೆಚ್‌ಟಿಯು (Anti Human Trafficking Unit) ಘಟಕಗಳಿಗೆ ವರ್ಗಾವಣೆ ನೀಡಲಾಗುವುದು.
- ಅನಾಥಶ್ರಮಗಳು, ಆಶ್ರಮಗಳಲ್ಲಿ ಆಧ್ಯಾತ್ಮಿಕ ಸ್ಥಳಗಳಲ್ಲಿ ಮತ್ತು ಬಾಲಮಂದಿರಗಳಲ್ಲಿ ಹುಡುಕುವುದು. ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆ ಬಗ್ಗೆ ಸಂಬಂಧಿಸಿದಂತೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ
- ಕಾಣೆ ಪ್ರಕರಣಗಳಲ್ಲಿ ಮೊಬೈಲ್ ಲೊಕೇಶನ್, ಸಿ.ಸಿ.ಟಿ.ವಿ ದೃಶ್ಯ, ಸಾಮಾಜಿಕ ಜಾಲತಾಣಗಳ ಮೂಲಕವು ಪತ್ತೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: HD 73 PCQ 2025**

(ಸಹಿ)

**(ಡಾ: ಜಿ. ಪರಮೇಶ್ವರ)**

ಗೃಹ ಸಚಿವರು

| Sl.No. | Unit Name | Kidnapping and Abduction (363 IPC) (Missing Boy and Missing Girl) | | | | | | | | |
|---|---|---|---|---|---|---|---|---|---|---|
| | | 2023 | | | 2024 | | | 2025 (July) | | |
| | | Girl | | | Girl | | | Girl | | |
| | | Reported | Traced | untraced | Reported | Traced | untraced | Reported | Traced | untraced |
| 1 | Bagalkot | 13 | 13 | 0 | 27 | 27 | 0 | 13 | 8 | 5 |
| 2 | Ballari | 29 | 29 | 0 | 27 | 26 | 1 | 24 | 14 | 10 |
| 3 | Belagavi City | 25 | 25 | 0 | 30 | 25 | 5 | 20 | 11 | 9 |
| 4 | Belagavi Dist | 59 | 56 | 3 | 39 | 34 | 5 | 37 | 17 | 20 |
| 5 | Bengaluru City | 760 | 740 | 20 | 819 | 760 | 59 | 482 | 262 | 220 |
| 6 | Bengaluru Dist | 151 | 150 | 1 | 190 | 178 | 12 | 102 | 65 | 37 |
| 7 | Bengaluru South | 77 | 76 | 1 | 73 | 71 | 2 | 50 | 32 | 18 |
| 8 | Bidar | 18 | 16 | 2 | 37 | 35 | 2 | 37 | 20 | 17 |
| 9 | Chamarajanagar | 22 | 22 | 0 | 19 | 18 | 1 | 18 | 6 | 12 |
| 10 | Chickballapura | 28 | 28 | 0 | 37 | 36 | 1 | 14 | 5 | 9 |
| 11 | Chikkamagaluru | 53 | 53 | 0 | 54 | 54 | 0 | 43 | 36 | 7 |
| 12 | Chitradurga | 60 | 59 | 1 | 73 | 68 | 5 | 47 | 21 | 26 |
| 13 | CID | 0 | 0 | 0 | 0 | 0 | 0 | 0 | 0 | 0 |
| 14 | Coastal Security | 0 | 0 | 0 | 0 | 0 | 0 | 0 | 0 | 0 |
| 15 | Dakshina Kannada | 8 | 8 | 0 | 16 | 16 | 0 | 4 | 2 | 2 |
| 16 | Davanagere | 64 | 63 | 1 | 83 | 80 | 3 | 44 | 36 | 8 |
| 17 | Dharwad | 10 | 10 | 0 | 9 | 9 | 0 | 12 | 9 | 3 |
| 18 | Gadag | 19 | 18 | 1 | 21 | 20 | 1 | 11 | 7 | 4 |
| 19 | Hassan | 49 | 47 | 2 | 69 | 65 | 4 | 57 | 34 | 23 |
| 20 | Haveri | 40 | 40 | 0 | 30 | 27 | 3 | 26 | 9 | 17 |
| 21 | Hubballi Dharwad City | 26 | 26 | 0 | 29 | 27 | 2 | 18 | 12 | 6 |
| 22 | ISD Bengaluru | 0 | 0 | 0 | 0 | 0 | 0 | 0 | 0 | 0 |
| 23 | K.G.F | 4 | 4 | 0 | 22 | 21 | 1 | 11 | 5 | 6 |
| 24 | Kalaburagi | 35 | 32 | 3 | 50 | 46 | 4 | 31 | 8 | 23 |
| 25 | Kalaburagi City | 19 | 19 | 0 | 35 | 31 | 4 | 23 | 18 | 5 |
| 26 | Karnataka Railways | 1 | 1 | 0 | 3 | 1 | 2 | 2 | 0 | 2 |
| 27 | Kodagu | 32 | 30 | 2 | 29 | 29 | 0 | 17 | 14 | 3 |
| 28 | Kolar | 52 | 51 | 1 | 56 | 56 | 0 | 29 | 15 | 14 |
| 29 | Koppal | 18 | 18 | 0 | 26 | 22 | 4 | 14 | 12 | 2 |
| 30 | Mandya | 68 | 68 | 0 | 65 | 63 | 2 | 42 | 29 | 13 |
| 31 | Mangaluru City | 22 | 22 | 0 | 27 | 27 | 0 | 11 | 3 | 8 |
| 32 | Mysuru City | 30 | 29 | 1 | 39 | 36 | 3 | 33 | 24 | 9 |
| 33 | Mysuru Dist | 39 | 36 | 3 | 67 | 55 | 12 | 86 | 39 | 47 |
| 34 | Raichur | 19 | 18 | 1 | 31 | 30 | 1 | 22 | 12 | 10 |
| 35 | Shivamogga | 74 | 71 | 3 | 69 | 62 | 7 | 57 | 33 | 24 |
| 36 | Tumakuru | 112 | 111 | 1 | 115 | 113 | 2 | 89 | 60 | 29 |
| 37 | Udupi | 17 | 17 | 0 | 16 | 16 | 0 | 12 | 9 | 3 |
| 38 | Uttara Kannada | 22 | 21 | 1 | 39 | 39 | 0 | 18 | 14 | 4 |
| 39 | Vijayanagara | 25 | 25 | 0 | 32 | 31 | 1 | 22 | 16 | 6 |
| 40 | Vijayapur | 23 | 23 | 0 | 25 | 21 | 4 | 36 | 13 | 23 |
| 41 | Yadgir | 8 | 8 | 0 | 18 | 18 | 0 | 5 | 3 | 2 |
| **Grand Total** | | **2131** | **2083** | **48** | **2446** | **2293** | **153** | **1619** | **933** | **686** |

| Sl.No. | Unit Name | Women Missing Cases | | | | | | | | |
|---|---|---|---|---|---|---|---|---|---|---|
| | | 2023 | | | 2024 | | | 2025 (up to July) | | |
| | | Women | | | Women | | | Women | | |
| | | Reported | Traced | Untraced | Reported | Traced | Untraced | Reported | Traced | Untraced |
| 1 | Bagalkot | 205 | 199 | 6 | 246 | 241 | 5 | 164 | 125 | 39 |
| 2 | Ballari | 95 | 87 | 8 | 136 | 130 | 6 | 80 | 54 | 26 |
| 3 | Belagavi City | 166 | 158 | 8 | 157 | 142 | 15 | 90 | 65 | 25 |
| 4 | Belagavi Dist | 404 | 390 | 14 | 385 | 365 | 20 | 250 | 196 | 54 |
| 5 | Bengaluru City | 3433 | 3353 | 80 | 3391 | 3278 | 113 | 2081 | 1727 | 354 |
| 6 | Bengaluru Dist | 673 | 654 | 19 | 767 | 736 | 31 | 512 | 449 | 63 |
| 7 | Bengaluru South | 415 | 406 | 9 | 447 | 436 | 11 | 207 | 186 | 21 |
| 8 | Bidar | 164 | 154 | 10 | 210 | 203 | 7 | 186 | 162 | 24 |
| 9 | Chamarajanagar | 200 | 197 | 3 | 267 | 262 | 5 | 181 | 168 | 13 |
| 10 | Chickballapura | 444 | 441 | 3 | 491 | 482 | 9 | 222 | 205 | 17 |
| 11 | Chikkamagaluru | 269 | 267 | 2 | 239 | 237 | 2 | 138 | 126 | 12 |
| 12 | Chitradurga | 541 | 531 | 10 | 647 | 624 | 23 | 383 | 341 | 42 |
| 13 | CID | 0 | 0 | 0 | 0 | 0 | 0 | 0 | 0 | 0 |
| 14 | Coastal Security Police | 0 | 0 | 0 | 0 | 0 | 0 | 0 | 0 | 0 |
| 15 | Dakshina Kannada | 73 | 73 | 0 | 71 | 70 | 1 | 36 | 32 | 4 |
| 16 | Davanagere | 585 | 572 | 13 | 611 | 597 | 14 | 390 | 356 | 34 |
| 17 | Dharwad | 163 | 158 | 5 | 210 | 206 | 4 | 126 | 110 | 16 |
| 18 | Gadag | 149 | 146 | 3 | 177 | 169 | 8 | 121 | 98 | 23 |
| 19 | Hassan | 283 | 275 | 8 | 329 | 319 | 10 | 200 | 174 | 26 |
| 20 | Haveri | 339 | 329 | 10 | 383 | 379 | 4 | 313 | 277 | 36 |
| 21 | Hubballi Dharwad City | 239 | 232 | 7 | 250 | 240 | 10 | 109 | 100 | 9 |
| 22 | ISD | 0 | 0 | 0 | 0 | 0 | 0 | 0 | 0 | 0 |
| 23 | K.G.F | 148 | 146 | 2 | 167 | 165 | 2 | 91 | 84 | 7 |
| 24 | Kalaburagi | 117 | 115 | 2 | 144 | 134 | 10 | 148 | 85 | 63 |
| 25 | Kalaburagi City | 121 | 117 | 4 | 149 | 143 | 6 | 116 | 84 | 32 |
| 26 | Karnataka Railways | 19 | 16 | 3 | 19 | 18 | 1 | 11 | 9 | 2 |
| 27 | Kodagu | 120 | 118 | 2 | 128 | 127 | 1 | 72 | 68 | 4 |
| 28 | Kolar | 453 | 445 | 8 | 401 | 395 | 6 | 212 | 189 | 23 |
| 29 | Koppal | 158 | 153 | 5 | 185 | 181 | 4 | 148 | 108 | 40 |
| 30 | Mandya | 466 | 462 | 4 | 423 | 409 | 14 | 281 | 246 | 35 |
| 31 | Mangaluru City | 94 | 92 | 2 | 93 | 91 | 2 | 51 | 37 | 14 |
| 32 | Mysuru City | 244 | 239 | 5 | 256 | 248 | 8 | 146 | 119 | 27 |
| 33 | Mysuru Dist | 429 | 422 | 7 | 496 | 482 | 14 | 364 | 324 | 40 |
| 34 | Raichur | 209 | 200 | 9 | 193 | 186 | 7 | 186 | 158 | 28 |
| 35 | Shivamogga | 496 | 486 | 10 | 546 | 527 | 19 | 314 | 278 | 36 |
| 36 | Tumakuru | 617 | 603 | 14 | 691 | 675 | 16 | 419 | 373 | 46 |
| 37 | Udupi | 91 | 91 | 0 | 111 | 107 | 4 | 45 | 42 | 3 |
| 38 | Uttara Kannada | 247 | 242 | 5 | 234 | 229 | 5 | 126 | 109 | 17 |
| 39 | Vijayanagara | 160 | 153 | 7 | 183 | 177 | 6 | 137 | 107 | 30 |
| 40 | Vijayapur | 293 | 284 | 9 | 339 | 319 | 20 | 240 | 182 | 58 |
| 41 | Yadgir | 70 | 70 | 0 | 100 | 97 | 3 | 61 | 47 | 14 |
| **Grand Total** | | **13392** | **13076** | **316** | **14272** | **13826** | **446** | **8957** | **7600** | **1357** |